# ‘ರಾಜರಥ’ದಲ್ಲಿ ಭಂಡಾರಿ ಬ್ರದರ್ಸ್



‘ರಂಗಿತರಂಗ’ದ ಪ್ರಸಿದ್ಧ ಜೋಡಿ ಅನೂಪ್ ಭಂಡಾರಿ ಮತ್ತು ನಿರೂಪ್ ಭಂಡಾರಿ ಸಹೋದರರು ‘ರಾಜರಥ’ದ ಮೂಲಕ ಮತ್ತೆ ಬೆಳ್ಳಿತೆರೆಗೆ ಬರುವ ತವಕದಲ್ಲಿದ್ದಾರೆ. ಇದಕ್ಕೆ ಮುನ್ನುಡಿ ರೂಪದಲ್ಲಿ ಕಳೆದ ವಾರವಷ್ಟೇ ‘ರಾಜರಥ’ದ ಟ್ರೇಲರ್ ಬಿಡುಗಡೆಯಾಗಿದೆ.

‘ರಾಜರಥ’ ಕನ್ನಡದ ಜೊತೆಗೆ ತೆಲುಗಿನಲ್ಲೂ ಸಿದ್ಧವಾಗಿದೆ. ಆಯಾ ಭಾಷೆಯ ಚಿತ್ರದ ಟ್ರೇಲರ್‌ಗಳಲ್ಲಿ ಪುನೀತ್ ರಾಜ್‌ಕುಮಾರ್ ಹಾಗೂ ರಾನಾ ದಗ್ಗುಬಾಟಿ ಅವರ ಧ್ವನಿ–ಚಿತ್ರಗಳನ್ನು ಬಳಸಿಕೊಂಡು, ಬಸ್ಸೊಂದರ ಕ್ಯಾನ್ವಾಸ್‌ನಲ್ಲಿ ಸಿನಿಮಾದ ತಾರಾಗಣವನ್ನು ವಿಭಿನ್ನವಾಗಿ ಪರಿಚಯಿಸಲಾಗಿದೆ. ಅನೂಪ್ ಹಾಗೂ ಆವಂತಿಕಾ ಶೆಟ್ಟಿ ನಾಯಕ–ನಾಯಕಿ ಪಾತ್ರಗಳಲ್ಲಿದ್ದರೆ ರವಿಶಂಕರ್ ಮತ್ತು ಆರ್ಯ ಪ್ರಮುಖ ಪಾತ್ರಗಳಲ್ಲಿದ್ದಾರೆ. ವಿಲನ್ ಪಾತ್ರಗಳಲ್ಲಿ ಜನಪ್ರಿಯರಾಗಿರುವ ರವಿಶಂಕರ್, ಈ ಚಿತ್ರದಲ್ಲಿ ಹಾಸ್ಯಪಾತ್ರದಲ್ಲಿ ಮಿಂಚಿದ್ದಾರಂತೆ. ಅಜನೀಶ್ ಲೋಕನಾಥ್ ಸಂಗೀತ, ವಿಲಿಯಮ್ ಡೇವಿಡ್ ಛಾಯಾಗ್ರಹಣ ಚಿತ್ರಕ್ಕಿದೆ.

ಚಿತ್ರದ ಕಥೆಯನ್ನು ಚಿತ್ರತಂಡ ಬಿಟ್ಟುಕೊಟ್ಟಿಲ್ಲ. ಆದರೆ, ‘ಒಂದಾನೊಂದು ಕಾಲದಲ್ಲಿ, ಒಂದಾನೊಂದು ಕಾಲೇಜಿನಲ್ಲಿ ಒಬ್ಬ ಸುಂದರವಾದ ಹುಡುಗಿ ಇದ್ದಳು. ಅವಳಿಗೊಬ್ಬ ಸುಂದರವಾದ ಹುಡುಗಿ...’ ಎನ್ನುವ ಟ್ರೇಲರ್‌ನಲ್ಲಿನ ಸೂಚನೆ ಕಾಲೇಜು ತರುಣ–ತರುಣಿಯ ಪ್ರೇಮಕಥೆ ಚಿತ್ರದಲ್ಲಿರುವುದನ್ನು ಸೂಚಿಸುವಂತಿದೆ. ನಿರೂಪ್ ನಿರ್ದೇಶನದ ಈ ಸಿನಿಮಾ, 2018ರ ಜನವರಿ ಕೊನೆಯಲ್ಲಿ ಅಥವಾ ಫೆಬ್ರುವರಿಯ ಮೊದಲ ವಾರದಲ್ಲಿ ತೆರೆ ಕಾಣುವ ನಿರೀಕ್ಷೆಯಿದೆ.



# ಪಾತರಗಿತ್ತಿ ಮತ್ತು ಪಾರೂಲ್!

ಹುಡುಗಿಯ ಹೆಸರು ಪಾರ್ವತಿ. ಅವಳು ಗೋಕರ್ಣದವಳು. ನಾಳೆ ಮದುವೆ ಎನ್ನುವಾಗ್ಗೆ ಸಂಬಂಧ ಮುರಿದುಬೀಳುತ್ತದೆ. ಅನಿರೀಕ್ಷಿತ ಸಂದರ್ಭದಿಂದ ಕಂಗಾಲಾದರೂ, ಮಾನಸಿಕವಾಗಿ ಕುಸಿಯದ ಪಾರ್ವತಿ, ತನ್ನನ್ನು ತಾನು ಕಂಡುಕೊಳ್ಳುವ ಹಂಬಲದಿಂದ ಪ್ಯಾರಿಸ್‌ಗೆ ಹೋಗುತ್ತಾಳೆ. ಇದೊಂದು ಬಗೆಯಲ್ಲಿ ಏಕವ್ಯಕ್ತಿ ಮಧುಚಂದ್ರ!

ಇದು ಬಾಲಿವುಡ್‌ನ ‘ಕ್ವೀನ್’ ಚಿತ್ರದ ಕಥೆ ಇದ್ದಂತೆ ಇದೆಯಲ್ಲವೇ? ಹೌದು, ಇದು ಅದೇ ಕಥೆ. ಕನ್ನಡದಲ್ಲೀಗ ‘ಬಟರ್‌ಫ್ಲೈ’ ಹೆಸರಲ್ಲಿ ತಯಾರಾಗುತ್ತಿದೆ. ಪಾತರಗಿತ್ತಿ ಚಲನಶೀಲತೆಗೆ ಹಾಗೂ ಬದುಕಿನ ಸಂಭ್ರಮಕ್ಕೆ ರೂಪಕವಲ್ಲವೇ. ಹಾಗಾಗಿ ‘ಬಟರ್‌ಫ್ಲೈ’ ಎಂದು ಚಿತ್ರವನ್ನು ಹೆಸರಿಸಲಾಗಿದೆ. ರಮೇಶ್ ಅರವಿಂದ್ ನಿರ್ದೇಶನದ ಸಿನಿಮಾದ ಮುಖ್ಯಪಾತ್ರದಲ್ಲಿ ಪಾರೂಲ್ ಯಾದವ್ ನಟಿಸುತ್ತಿದ್ದಾರೆ. ಪಾರೂಲ್ ಚಿತ್ರದ ಸಹ ನಿರ್ಮಾಪಕಿ ಕೂಡ.

ಕಳೆದ ಐದು ವರ್ಷಗಳಿಂದಲೂ ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಿರುವ ಪಾರೂಲ್, ಈವರೆಗೆ ಹೆಚ್ಚು ಕಾಣಿಸಿಕೊಂಡಿರುವುದು ಗ್ಲಾಮರಸ್ ಪಾತ್ರಗಳಲ್ಲಿ. ಈಗ ನಾಯಕಿ ಪ್ರಧಾನ ಕಥನದಲ್ಲಿನ ಪಾತರಗಿತ್ತಿಯಂಥ ಹುಡುಗಿಯ ಪಾತ್ರ ಅವರಿಗೆ ಸವಾಲೆನ್ನಿಸಿದೆ, ಖುಷಿ ಕೊಟ್ಟಿದೆ. ಕನ್ನಡದ ಜೊತೆಗೆ ತಮಿಳು, ತೆಲುಗು ಹಾಗೂ ಮಲಯಾಳಂನಲ್ಲೂ ಈ ಚಿತ್ರ ರೂಪುಗೊಳ್ಳಲಿದೆ. ಇವುಗಳಲ್ಲಿ ಕನ್ನಡ ಹಾಗೂ ತಮಿಳು ಆವೃತ್ತಿಗಳ ನಿರ್ದೇಶನ ರಮೇಶ್ ಅವರದು. ಸತ್ಯ ಹೆಗಡೆ ಛಾಯಾಗ್ರಹಣ ಚಿತ್ರಕ್ಕಿದೆ.

ತಮ್ಮ ಪಾತ್ರಕ್ಕಾಗಿ ಪಾರೂಲ್ ಸಾಕಷ್ಟು ಹೋಂ ವರ್ಕ್ ಮಾಡಿದ್ದಾರೆ. ಕನ್ನಡದ ಉಚ್ಚಾರಣೆ ಸರಿಪಡಿಸಿಕೊಳ್ಳಲಿಕ್ಕಾಗಿ ಹತ್ತು ದಿನಗಳ ಟ್ಯೂಷನ್ ತೆಗೆದುಕೊಂಡಿದ್ದಾರೆ. ಚಿತ್ರದ ಮೊದಲ ದೃಶ್ಯದಿಂದ ಕೊನೆಯವರೆಗೂ ಆವರಿಸಿಕೊಂಡಿರುವ ಈ ಪಾತ್ರ ತಮ್ಮ ವೃತ್ತಿಜೀವನದ ಮಹತ್ವದ ತಿರುವುಗಳಲ್ಲೊಂದು ಎನ್ನುವುದು ಅವರ ನಂಬಿಕೆ.

■ ರಘು